**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 18/2022**

ಪಿ.ಡಬ್ಲ್ಯು: **17** ಸಿಡಬ್ಲ್ಯು: **33**

| | | |
|---|---|---|
| ಸಾಕ್ಷಿಯ ಹೆಸರು | : | ಕೆ. ಬಸವರಾಜ್ |
| ತಂದೆ ಹೆಸರು | : | ಕೆ. ಕರಿಬಸಪ್ಪ |
| ವಯಸ್ಸು | : | **53** ವರ್ಷ |
| ವೃತ್ತಿ | : | ಎ ಎಸ್ ಐ ಬ್ರೂಸ್ ಪೇಟೆ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: **04-03-2023**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

ನಾನು **2021** ಮೇ ತಿಂಗಳಿಂದ ಇಲ್ಲಿಯವರೆಗೆ ಬ್ರೂಸ್ ಪೇಟೆ ಪೊ . ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿ: **09-12-2021** ರಂದು ನಮ್ಮ ಠಾಣೆಯ ಪಿ . ಐ. ಷಣ್ಮುಕಪ್ಪ ಅವರ ಮೌಖಿಕ ಆದೇಶದ ಮೇರೆಗೆ ಈ ಪ್ರಕರಣದ ಕಡತವನ್ನು ಚಾಸಾ-**32** ರವರಿಂದ ಪಡೆದು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲನೆ ಮಾಡಿರುತ್ತೇನೆ .

ದಿ: **10-12-2021** ರಂದು ಚಾಸಾ-**24,26,28** ರವರ ಹೇಳಿಕೆಯನ್ನು ಪಡೆದಿರುತ್ತೇನೆ . ಈ ಪ್ರಕರಣದ ಕೃತ್ಯ ಸ್ಥಳದ ಪಂಚನಾಮೆ ಮಾಡಿದ ಚಾಸಾ-**2** ಮತ್ತು **3** ರವರನ್ನು ಹಾಜರುಪಡಿಸಿದ ಚಾಸಾ-**25** ರವರ ಹೇಳಿಕೆ ಪಡೆದಿರುತ್ತೇನೆ .

ದಿಃ **12-12-2021** ರಂದು ಈ ಪ್ರಕರಣದಲ್ಲಿ ಜಪ್ತುಗೊಳಿಸಿದ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲು ಡಿ ವೈ ಎಸ್ ಪಿ ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ.

ದಿಃ **13-12-2021** ರಂದು ಪ್ರಕರಣದಲ್ಲಿ ಜಪ್ತುಗೊಳಿಸಿದ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಪಿ . ಸಿ ರಮೇಶ್ ಬಾಬು ರವರ ಮುಖಾಂತರ ಆರ್ ಎಫ್ ಎಸ್ ಎಲ್ ಕಲಬುರ್ಗಿ ರವರಿಗೆ ಕಳುಹಿಸಿಕೊಟ್ಟಿದ್ದು ಮರಳಿ ಅವರು ನೀಡಿದ ಹಿಂಬರಹವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ **15-12-2021** ರಂದು ಈ ಪ್ರಕರಣದ ಗಾಯಾಳು ಶ್ರೀ ವೆಂಕಟಸ್ವಾಮಿ , ಅಜಯಕುಮಾರ್ , ಸರಸ್ವತಿ , ಆದಿನಾರಾಯಣ , ವಿಜಯಕುಮಾರ್ ಮತ್ತು ಶ್ರೀಮತಿ ಚಂದ್ರಕಲಾ ಇವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ . ಸಾಕ್ಷಿಯೂ ಸದರಿ ಗಾಯದ ಪ್ರಮಾಣ ಪತ್ರ ನೋಡಿ ಗುರುತಿಸಿರುತ್ತಾರೆ.

ದಿಃ **16-12-2021** ರಂದು ಈ ಪ್ರಕರಣದಲ್ಲಿ ಮಾಲುಪಟ್ಟಿ ಸಂಖ್ಯೆ **174-2021** ರಲ್ಲಿ ತಾಂತ್ರಿಕ ದೋಷದಿಂದ ಕ್ರಮ ಸಂಖ್ಯೆ **8** ರಿಂದ **10** ರ ವರೆಗೆ ದ್ವಿಚಕ್ರ ವಾಹನಗಳ ಬಗ್ಗೆ ನಮೂದು ಆಗದ ಇದ್ದುದ್ದರಿಂದ ಇವುಗಳ ಸೇರ್ಪಡೆಗೆ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿಯೂ ಸದರಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**-32** ಎಂದು , ಸಾಕ್ಷಿಯ ಸಹಿಯನ್ನು ನಿಪಿ**-32**(ಎ) ಎಂದು ಗುರುತಿಸಲಾಯಿತು.

ದಿಃ **01-12-2021** ರಂದು ರಾಃ **7-30** ರಿಂದ **8-30** ರ ಮಧ್ಯದ ಅವದಿಯಲ್ಲಿ ಚಾಸಾ**-1** ರವರ ಮನೆಯ ಮುಂದೆ ಕೃತ್ಯ ನಡೆದ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ವರದಿ , ನೀಡುವಂತೆ ಜಸ್ಕಾಂ ಕೆ ಇ ಬಿ ಬಳ್ಳಾರಿ ರವರಿಗೆ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿಗೆ

ಮನವಿ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-33 ಎಂದು , ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು .

ದಿಃ **18-12-2021** ರಂದು ಈ ಪ್ರಕರಣದ ಗಾಯಾಳು ಸರಸ್ವತಿರವರ ಹೇಳಿಕೆ ಪಡೆಯಲು ದಂ . ಪ್ರ . ಸಂ ಕಲಂ **164** ರಡಿಯಲ್ಲಿ ಹೇಳಿಕೆ ಪಡೆಯಲು ಮಾನ್ಯ ನ್ಯಾಯಾಧೀಶರಿಗೆ ಮನವಿ ಸಲ್ಲಿಸಿರುತ್ತೇನೆ . ಸಾಕ್ಷಿಗೆ ಮನವಿ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-34 ಎಂದು , ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು . ಅದೇ ದಿನ ಗಾಯಳುಗಳಿಗೆ ಚಿಕಿತ್ಸೆ ನೀಡಿದ ಬಗ್ಗೆ ವೈದ್ಯಾಧಿಕಾರಿಗಳಿಂದ ಚಿಕಿತ್ಸೆ ಮಾಡಿದ ವಿಧಾನದ ವಿವರಣೆ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ . ಸಾಕ್ಷಿಗೆ ಮನವಿ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-35 ಎಂದು , ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು .

ದಿಃ **21-12-2021** ರಂದು ಈ ಪ್ರಕರಣದಲ್ಲಿ ಕೆಲವು ದಾಖಲಾತಿಗಳು ಬರಲು ಬಾಕಿ ಇಟ್ಟು ದೊ. ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ದಿಃ **24-12-2021** ರಂದು ಈ ಪ್ರಕರಣದಲ್ಲಿ ಎಫ್ ಎಸ್ ಎಲ್ ವರದಿಯನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ವಿದ್ಯುತ್ಶಕ್ತಿ ಕಂಪನಿಯಿಂದ ಘಟನಾ ಸ್ಥಳದಲ್ಲಿ ದಿಃ **01-12-2021** ರಂದು ಸಮಯ **7-30** ರಿಂದ ರಾಃ **8-30** ರ ಮಧ್ಯದ ಅವದಿಯಲ್ಲಿ ಯಾವುದೇ ರೀತಿಯ ವಿದ್ಯುತ್ ಸರಬರಾಜಿನಲ್ಲಿ ವ್ಯತೆಯ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ . ಸಾಕ್ಷಿಯೂ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-36 ಎಂದು ಗುರುತಿಸಲಾಯಿತು .

ದಿಃ **27-12-2021** ರಂದು ಈ ಪ್ರಕರಣದಲ್ಲಿ ಬಳ್ಳಾರಿಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪಿಡಬ್ಲು ಡಿ ಇಲಾಖೆ ಯವರಿಂದ ಈ ಪ್ರಕರಣದ ಕೃತ್ಯ ಸ್ಥಳದ ನಕ್ಷೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ . ಸಾಕ್ಷಿಯೂ ಸದರಿ ಕವರಿಂಗ್ ಲೇಟರ್ ಮತ್ತು ನಕಾಶೆಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-**37** ಮತ್ತು **38** ಎಂದು ಗುರುತಿಸಲಾಯಿತು .

ದಿಃ **28-12-2021** ರಂದು ಈ ಪ್ರಕರಣದ **2** ನೇ ಆರೋಪಿಯೂ ಜಾಮೀನು ಪಡೆದು ನನ್ನ ಮುಂದೆ ಹಾಜರು ಆದ ಮೇರೆಗೆ ಆತನನ್ನು ವಿಚಾರಣೆ ಮಾಡಿ ಬಿಡುಗಡೆಗೊಳಿಸಿರುತ್ತೇನೆ . ಸಾಕ್ಷಿಯೂ ಎಫ್ ಎಸ್ ಎಲ್ ವರದಿ ಮತ್ತು ಅದರ ಹಿಂಬರವನ್ನು ಗುರುತಿಸಿದ್ದು ಅವುಗಳನ್ನು ನಿಪಿ-**39** ಎಂದು , ಸಾಕ್ಷಿಯ ಸಹಿಯನ್ನು ನಿಪಿ-**39**(ಎ) ಎಂದು ಗುರುತಿಸಲಾಯಿತು . ಮಾದರಿ ಸೀಲ್ ನ್ನು ನಿಪಿ-**40** ಎಂದು ಹಿಂಬರವನ್ನು ನಿಪಿ-**41** ಎಂದು , ಸಾಕ್ಷಿಯ ಸಹಿಯನ್ನು ನಿಪಿ-**41**(ಎ) ಎಂದು ಗುರುತಿಸಲಾಯಿತು . ದಾಖಲೆಗಳನ್ನು ಕೊಡುವ ಬಾಕಿ ಇದೆ ಎಂದು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದು ಸಾಕ್ಷಿಯೂ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**42** ಎಂದು , ಸಾಕ್ಷಿಯ ಸಹಿಯನ್ನು ನಿಪಿ-**42**(ಎ) ಎಂದು ಗುರುತಿಸಲಾಯಿತು .

ದಿಃ **31-12-2021** ರಂದು ಈ ಪ್ರಕರಣದ ಬಾಕಿ ಇರುವ ದಾಖಲೆಗಳಾದ ಗಾಯದ ಪ್ರಮಾಣ ಪತ್ರ , ಎಫ್ ಎಸ್ ಎಲ್ ವರದಿ , ವಿದ್ಯುತ್ ಚಕ್ತಿ ವರದಿ , ಕಲಂ **64** ರಡಿಯಲ್ಲಿ ಪಡೆದ ಹೇಳಿಕೆಗಳು ಮತ್ತು ಅವುಗಳಿಗೆ ಸಂಬಂದಿಸಿದ ಸಾಕ್ಷಿಗಳನ್ನು ಮಾಡುವಂತೆ ಅನುಮತಿ ಕೋರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯೂ ನ್ಯಾಯಾಲಯದ ಮುಂದೆ ಹಾಜರಿರುವ **2** ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರಿಂದಃ</u>

ಈ ಪ್ರಕರಣದಲ್ಲಿ ಮೇಲಾಧಿಕಾರಿಗಳ ಲಿಖಿತ ಆದೇಶವಿಲ್ಲದೆ ತನಿಖಾ ಹಂತದಲ್ಲಿ ಇರುವ ಪ್ರಕರಣದ ತನಿಖೆಯನ್ನು ಇನ್ನೊಬ್ಬ ತನಿಖಾಧಿಕಾರಿಯಿಂದ ತೆಗೆದುಕೊಳ್ಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಮೊದಲಿನ ತನಿಖಾಧಿಕಾರಿಯೂ ನನಗೆ ಈ ಪ್ರಕರಣದ ತನಿಖೆಯನ್ನು ಮುಂದುವರೆಸಲು ಅಧಿಕಾರ ಕೊಟ್ಟ ಬಗ್ಗೆ ಮತ್ತು ನಾನು ಅವರಿಂದ ಕಡತವನ್ನು ಪಡೆದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಜಪ್ತುಗೊಳಿಸಿದ ವಸ್ತುಗಳು ನಾನು ಆರ್ ಎಪ್ ಎಸ್ ಎಲ್ ಗೆ ಪರೀಕ್ಷೆಗೆ ಕಳುಹಿಸುವಾಗ ಸದರಿ ವಸ್ತುಗಳು ಶರ್ಮಸ ಅವರ ಕಬ್ಜಾದಲ್ಲಿ ಇದ್ದವು. ಯಾವ ಯಾವ ವಸ್ತುಗಳು ಮಾಲುಖಾನೆ ರಿಜಿಸ್ಟರ್ ನಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ವಸ್ತುಗಳು ಮಾಲುಖಾನೆ ರಿಜಿಸ್ಟರ್ ನಲ್ಲಿ ನಾನು ಪಡೆದಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಎಫ್ ಎಸ್ ಎಲ್ ಗೆ ಸದರಿ ವಸ್ತುಗಳನ್ನು ಕಳುಹಿಸುವ ಮೊದಲು ಅದಕ್ಕೆ ಉಪಯೋಗಿಸಿದ ಸೀಲ್ ಚಾಸಾ-**32** ರವರ ಕಬ್ಜಾದಲ್ಲಿ ಇತ್ತು. ಸದರಿ ಸೀಲ್ ನ್ನು ನನ್ನ ಕಬ್ಜಾಕ್ಕೆ ಪಡೆದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ. ನಾನು ಸದರಿ ವಸ್ತು ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಮೊದಲು ಸೀಲ್ ಗೆ ಯಾವ ಅಕ್ಷರ ನಮೂದಿಸಿರುತ್ತೇನೆ ಎಂದು ಮತ್ತು ಸದರಿ ಸೀಲ್ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಆರ್ ಎಫ್ ಎಸ್ ಎಲ್ ಗೆ ವಸ್ತುಗಳನ್ನು ಪರೀಕ್ಷೆಗೆ ಕಳುಹಿಸುವ ಮೊದಲು ಆರೋಪಿತರ ರಕ್ತದ ಗುಂಪನ್ನು ಪರೀಕ್ಷೆ ಮಾಡಲು ಮಾದರಿ ರಕ್ತ ಸಂಗ್ರಹಿಸಿರುವುದಿಲ್ಲ. ಆರ್ ಎಫ್ ಎಸ್ ಎಲ್ ಗೆ ಕಳುಹಿಸಿದ ವಸ್ತು ಗಳನ್ನು ನಾನು ಸೃಷ್ಟಿ ಮಾಡಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ **12-12-2021** ರಂದು ಸಲ್ಲಿಸಿರುವ ವಾಹನಗಳ ಸ್ಥಿತಿ ಬಗ್ಗೆ ಆರ್ ಟಿ ಓ ದಿಂದ ಪರೀಕ್ಷೆ ಮಾಡಿಸಿ ವರದಿ ಪಡೆದಿಲ್ಲ . ದೂರುದಾರರ ಮನೆಯಲ್ಲಿ ವಿದ್ಯುತ್ಶಕ್ತಿ ದಿಃ **01-12-2021** ರಂದು ಇರುವ ಬಗ್ಗೆ ಅವರ ಮೀಟರ್ ನಂಬರ್ ನಮೂದಿಸಿರುವುದಿಲ್ಲ ಮತ್ತು ಅವರ ಮನೆಗೆ ವಿದ್ಯುತ್ ಸರಬರಾಜು ಇರುವ ಬಗ್ಗೆ ಹಾಗೂ ಅವರ ಮನೆಯ ಮುಂದೆ ಇರುವ ವಿದ್ಯುತ್ಶಕ್ತಿ ದೀಪದ ಬಗ್ಗೆ ನಾನು ತನಿಖೆ ಮಾಡಿಲ್ಲ ಎಂದರೆ ಸರಿ . ಜಸ್ಕಾಂ ವರದಿಯನ್ನು ನಮಗೆ ಅನುಕೂಲವಾಗುವಂತೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ . ನಾನು ಪಿಡಬ್ಲು ಡಿ ಅವರಿಗೆ ಯಾವುದೇ ಮನವಿ ಸಲ್ಲಿಸಿಲ್ಲ ಅದರಂತೆ ಯಾವುದೇ ನಕಾಶೆ ಪಡೆದಿಲ್ಲ ಎಂದರೆ ಸರಿಯಲ್ಲ . ನಿಪಿ-**37** ಮತ್ತು **38** ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ . ನಾನು ಮಾಡಿದ ತನಿಖೆಯಲ್ಲಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷದಾರಗಳು ಇಲ್ಲದೆ ಇದ್ದರೂ ಸಹ ಚಾಸಾ-**1** ರವರ ಸುಳ್ಳು ದೂರಿಗೆ ಪೂರಕವಾಗಿ ದೊ. ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ತಲ್ ಮಾಮಿಡಿ ಗ್ರಾಮದಲ್ಲಿ ಮರಳು ವಿಚಾರಕ್ಕೆ ಆದ ಪ್ರಕರಣದ ಸಂಖ್ಯೆ: **348-2021** ರಲ್ಲಿ ದಾಖಲಾದ ಪ್ರಕರಣದ ದಾಖಲೆಗಳನ್ನು ಈ ಪ್ರಕರಣದಲ್ಲಿ ನಾನು ಸಂಗ್ರಹಿಸಿರುವುದಿಲ್ಲ. ಸದರಿ ದಾಖಲೆಗಳನ್ನು ದೊ. ಪಟ್ಟಿಯೊಂದಿಗೆ ನಾನು ಸಲ್ಲಿಸಿರುತ್ತೇನೆ ಅವುಗಳನ್ನು ಈಗಾಗಲೇ ನಿಡಿ-**1** ಮತ್ತು **2** ಎಂದು ಗುರುತಿಸಲಾಗಿರುತ್ತದೆ . ಸದರಿ ಪ್ರಕರಣದಲ್ಲಿ ಈ ಪ್ರಕರಣದ ಆರೋಪಿತರು ಯಾರು ಭಾಗಿಯಾಗಿರುವುದಿಲ್ಲ ಎಂದರೆ ಸರಿ . ಆ ಪ್ರಕರಣದ ದೊ. ಪಟ್ಟಿಯನ್ನು ಪಡೆದು ನಾನು ಈ ಕಡತದಲ್ಲಿ ಅಳವಡಿಸಿಲ್ಲ ಎಂದರೆ ಸರಿ .

ಮರುವಿಚಾರಣೆ ಇಲ್ಲ.
(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.